**ಸಾಕ್ಷಿಯನ್ನು ದಿಃ 17.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 3 ನೇ ಎದುರುದಾರರ ಪರ ವಕೀಲರಿಂದಃ**

1. ನನ್ನ ಮಗ ಆ ದಿನ ಪ್ರಯಾಣಿಸುತ್ತಿದ್ದ ಬೈಕ್ 2 ನೇ ಎದುರುದಾರರಿಗೆ ಸೇರಿದ್ದು ಎಂದರೆ ಸರಿ. ಆ ದಿನ ಸದರಿ ವಾಹನ ಮಹೇಶ್ ಅವರ ಬಳಿ ಇತ್ತು ಎಂದರೆ ಸರಿ. 3 ನೇ ಎದುರುದಾರರು ಸದರಿ ಬೈಕಿಗೆ ಕೇವಲ ಲೋನ್ ನ್ನು ನೀಡಿದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಬೈಕಿಗೆ ವಿಮೆ ಚಾಲ್ತಿಯಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. 4 ನೇ ಎದುರುದಾರರು ಸದರಿ ವಿಮಾ ಕಂಪನಿ ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿ ಕೇವಲ ಸಾಲ ಮಾತ್ರ ನೀಡಿರುವ ಕಾರಣ ಅಲ್ಲದೇ ವಾಹನ 2 ನೇ ಎದುರುದಾರರ ಸ್ವಾಧೀನದಲ್ಲಿದ್ದ ಕಾರಣ 3 ನೇ ಎದುರುದಾರರು ಪರಿಹಾರ ನೀಡಲು ಭಾಧ್ಯರಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಎದುರುದಾರರ ಪರ ವಕೀಲರಿಂದಃ**

1. ನನ್ನ ಮಗ ಹೋಗುತ್ತಿದ್ದ ವಾಹನ ಯಾವ ಕಂಪನಿಯ ವಿಮೆಗೆ ಒಳಪಟ್ಟಿತ್ತು ಎಂದು ನನಗೆ ಗೊತ್ತಿಲ್ಲ. 1 ನೇ ಎದುರುದಾರರ ವಾಹನದಿಂದ ಅಪಘಾತ ಆಗಿರುವ ಕಾರಣ ವಿಮಾದಾರರನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ. ಬೈಕ್ ನಂಬರ್ ನನಗೆ ಗೊತ್ತಿಲ್ಲ. ಅಪಘಾತಪಡಿಸಿದ ಟಾಟಾ ಏಸ್ ವಾಹನದ ಸಂಖ್ಯೆ ನನಗೆ ಗೊತ್ತಿಲ್ಲ. ನನ್ನ ಮಗ ಹೋಗುತ್ತಿದ್ದ ಬೈಕನ್ನು ಮಹೇಶ್ ಎಂಬುವವರು ಚಾಲಯಿಸುತ್ತಿದ್ದ. ಅಪಘಾತದಲ್ಲಿ ಮಹೇಶ್ ಎಂಬುವವರ ತಪ್ಪೇನು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಪೋಲಿಸರು ದೋಷಾರೋಪಣ ಪಟ್ಟಿಯನ್ನು ಟಾಟಾ ಏಸ್ ಕಂಪನಿಯ ಮೇಲೆ ಹಾಕಿದ್ದಾರೆ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿದೆ. ನನ್ನ ಅರ್ಜಿ ಹಾಗೂ ಪ್ರಮಾಣ ಪತ್ರದ ಪ್ರಕಾರ ಮೊದಲನೆ ಎದುರುದಾರರ ತಪ್ಪಿನಿಂದ ಆಗಿದೆ ಎಂದರೆ ಸರಿ. ಅದಕ್ಕೆ ವಿಮೆ ಇತ್ತೊ ಇಲ್ಲವೋ ನನಗೆ ಗೊತ್ತಿಲ್ಲ.

2. ನಾನು ಕೂಲಿ ಕೆಲಸ ಮಾಡುತ್ತೇನೆ. ನನಗೆ ಒಬ್ಬನೇ ಮಗ ಹಾಗೂ ಒಬ್ಬಳು ಮಗಳು. ಮನೆ ಸಂಸಾರ ನಾನೇ ನೋಡಿಕೊಳ್ಳುತಿದ್ದೆ ಎಂದರೆ ಸರಿಯಲ್ಲ. ಮಗಳಿಗೆ ಮದುವೆಯಾಗಿಲ್ಲ. ಅವಳು ವಿದ್ಯಾಭ್ಯಾಸ ಮಾಡುತ್ತಿದ್ದಾಳೆ. ನಾನೇ ಸಂಸಾರದ ಜವಾಬ್ದಾರಿ ಹೊತ್ತಿರುವ ಕಾರಣ ನಾವು ಯಾರು ಮಗನ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತ ಬೈಕ್ ಸವಾರನ ತಪ್ಪಿನಿಂದ ಆಗದೆ ಇರುವ ಕಾರಣ 4 ನೇ ಎದುರುದಾರರ ಪರಿಹಾರ ನೀಡಲು ಭಾದ್ಯರಲ್ಲ ಎಂದರೆ ಸರಿಯಲ್ಲ. ನನ್ನ ಮಗನೊಂದಿಗೆ ಇನ್ನಿಬ್ಬರು ಬೈಕ್ ನಲ್ಲಿ ಇದ್ದರು. 1 ನೇ ಎದುರುದಾರರ ವಾಹನಕ್ಕೆ ವಿಮೆ ಇಲ್ಲದಿರುವ ಕಾರಣ ಪರಿಹಾರಕ್ಕಾಗಿ 4 ನೇ ಎದುರುದಾರರನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹೇಶ್ ಗೆ ಡಿ ಎಲ್ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಆತನಿಗೆ ಡಿ ಎಲ್ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆದ ಕಾರಣ 4 ನೇ ಎದುರುದಾರರು ಪರಿಹಾರ ನೀಡಲು ಭಾದ್ಯರಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದಃ</u>**

1. 14 ನೇ ತಾರೀಕಿನಂದು ಫೋನ್ ಕರೆ ಬಂದ ಮೇರೆಗೆ ಅಪಘಾತ ಸ್ಥಳಕ್ಕೆ ಹೋಗಿದ್ದೇನೆ. ಆಗ ಮಗನನ್ನು ಆಸ್ಪತ್ರೆಗೆ ಸೇರಿಸಿ ಆಗಿತ್ತು. ನನ್ನ ಮಗ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದ. 1 ನೇ ಎದುರುದಾರರನ್ನು ನಾನು ನೋಡಿಲ್ಲ. ಅವರೇ ಪೋಲಿಸ್ ಠಾಣೆಗೆ ಮಾಹಿತಿ ನೀಡಿ 108 ಕ್ಕೆ ಕರೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಬೈಕಿನಲ್ಲಿದ್ದ ಮೂವರು ಹೆಲ್ಮೆಟ್ ಧರಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗ ಮದ್ಯಪಾನ ಮಾಡುತ್ತಿರಲಿಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.